**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1357/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಬಿ.ಎಸ್ ರವಿಶಂಕರ** | ಪ್ರಾಸಾಃ 3 |
| ತಂದೆಯ/ಗಂಡನ ಹೆಸರು | | **ಬಿ.ಎಸ್ ಶ್ರೀಕಂಠಪ್ರಸಾದ್** | ಚಾಸಾಃ 23 |
| ವಯಸ್ಸು | | 41 ವರ್ಷ | |
| ಕೆಲಸ | | ಸಿ.ಪಿ.ಐ ಲಕ್ಷ್ಮಿಪುರಂ ಪೊಲೀಸ್ ಠಾಣೆ ಮೈಸೂರು ನಗರ | ಸಾ ಪ್ರ ಬೋ |
| ವಾಸ | | ಮೈಸೂರು | ದಿಃ 30/07/2024 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಬಿಳಿಗೆರೆ ಪೋಲಿಸ್ ಠಾಣೆಯಲ್ಲಿ ದಿಃ17.09.2018 ರಿಂದ ದಿಃ11.01.2019 ರ ವರೆಗೂ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 21.10.2018 ರಂದು ಬೆಳಿಗ್ಗೆ 8 ಗಂಟೆಯಲ್ಲಿ ನಾನು ಠಾಣೆಯಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ನಂ.202/2018 ರಲ್ಲಿ ಭಾ.ದಂ.ಸಂ.ಕಲಂ 279, 337,304(ಎ) ರೀತ್ಯಾ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ಅದೇ ದಿನ ಚಾಸಾ 21 ರವರ ಜೊತೆ ಬೆಳಿಗ್ಗೆ 9.30 ರಿಂದ 11.30 ರವರೆಗೆ ನಂಜನಗೂಡು ಸಾರ್ವಜನಿಕ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-6 ರಿಂದ ಚಾಸಾ-8 ರವರ ಸಮಕ್ಷಮ ಅಪಘಾತದಲ್ಲಿ ಮೃತಪಟ್ಟ ಗಿರೀಶ್ ರವರ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ನಂತರ ಪ್ರಕರಣವು ಘೋರ ಪ್ರಕರಣವಾಗಿರುವುದರಿಂದ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-24 ರವರಿಗೆ ಹಸ್ತಾಂತರಿಸಿರುತ್ತೇನೆ.

ಈಗ ನನಗೆ ತೋರಿಸಿದ ದಾಖಲೆಯು ನಾನು ಸ್ವೀಕರಿಸಿದ ದೂರಾಗಿದ್ದು, ಅದರಲ್ಲಿ ನನ್ನ ರುಜು ಇರುತ್ತದೆ. ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯು ನಾನು ದಾಖಲಿಸಿದ ಪ್ರ.ವ.ವರದಿಯಾಗಿದ್ದು ಅದನ್ನು ನಿಪಿ-15 ಎಂದು, ಸಾಕ್ಷಿಯ ರುಜುವನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯು ಗಿರೀಶ್ ರವರ ಶವತನಿಖಾ ವರದಿಯಾಗಿದ್ದು ಅದನ್ನು ಈಗಾಗಲೇ ನಿಪಿ-೮ ಎಂದು ಗುರುತಿಸಲಾಗಿದ್ದು, ಸಾಕ್ಷಿಯ ರುಜುವನ್ನು ನಿಪಿ-೮(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಎಂ.ಎ.ಎಸ್. ವಕೀಲರಿಂದಃ**

ದೂರಿನ ಆಧಾರದ ಮೇಲೆ ಪ್ರ.ವ ವರದಿಯನ್ನು ದಾಖಲಿಸಿದ್ದೇನೆ. ಆರೋಪಿಯ ವಿರುದ್ದ ಸುಳ್ಳು ಪ್ರ.ವ ವರದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**